ಒಂದು ಊರಿನಲ್ಲಿ ಕಂದಾಯ ಕೊಡುವ ಶಕ್ತಿ ಇಲ್ಲವಿದ್ದರೆ ವಸೂಲು ಮಾಡಬೇಡಿ, ಶಕ್ತಿಇದ್ದವರ ಹತ್ತಿರ ವಸೂಲು ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾದ ಅಧಿಕಾರವನ್ನು ಬಿಟ್ಟಿದ್ದೇವೆಂದು ಹೇಳಿದ್ದೀರಲ್ಲಾ, ಇದನ್ನೆಲ್ಲಾ ಯಾವ ಪರಿಪತ್ರದಲ್ಲಿ ಕಾಣಿಸಿದ್ದೀರಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾಧಿಕಾರಿಗಳಿಗೆ ಈ ವಿಚಾರದಲ್ಲಿ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿರುವುದನ್ನು ಒಪ್ಪಿಕೊಳ್ಳುತ್ತೇನೆ. ಜಿಲ್ಲಾಧಿಕಾರಿಗಳು, ಯಾರಿಗಾದರೂ ಕಂದಾಯ ಕೊಡುವ ಶಕ್ತಿ ಇಲ್ಲವೆಂದೆ ವಸೂಲಿಯನ್ನು ನಿಲ್ಲಿಸಬಹುದು.

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮೀಷನ್ ಅಧಿಕಾರಿಗಳು ಮೈಸೂರು ಸಂಸ್ಥಾನದ ಅಭಾವ ಪ್ರದೇಶಗಳಿಗೆ ಬಂದು ನೋಡಿ ಆ ಪ್ರದೇಶಗಳಿಗೆ ಯಾವ ರೀತಿ ಸಹಾಯ ಮಾಡಬೇಕೆಂಬ ವರದಿಯನ್ನು ಕೊಟ್ಟರೋ ಅದನ್ನು ತಾವು ಬಿಡಿಗೆ ಒತ್ತಿದ್ದೀರಿ. ಅವರು ಕಂದಾಯವನ್ನು ಮನ್ನಾಮಾಡಿಕ್ಕಂಥ ತತ್ವವನ್ನೇನಾದರೂ ಸಲಹೆ ಮಾಡಿದ್ದಾರೆಯೇ? ಆದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರು ಹೇಳಿದಂತೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡಬಹುದು. ಏನೋ ಪತ್ರಿಕೆಗಳವರು ಹೇಳಿದರೆ ಅದಕ್ಕೆ ನಾವು ಉತ್ತರ ಕೊಡುವುದಕ್ಕಾಗುವುಲ್ಲ. ಪ್ಲಾನಿಂಗ್ ಕಮೀಷನರ್‌ರವರು ತಮ್ಮ ವರದಿಯನ್ನು ಕೇಂದ್ರ ಸರ್ಕಾರಕ್ಕೆ ವರದಿಮಾಡಿದ್ದಾರೆ. ಅಲ್ಲಿಂದ ಒಂದು ಕಾಪಿ ನಮಗೆ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎಂ. ದೇವ್.—ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾದುದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ತುಮಕೂರು ಜಿಲ್ಲೆಯ ಕುಣಿಗಲ್, ಚಿಕ್ಕನಾಯಕನಹಳ್ಳಿ, ಸಿರಾ, ಮುಂತಾದ ಕಡೆಗಳಲ್ಲಿ 75 ಭಾಗ ಕಂದಾಯ ವಸೂಲಾಗುವ ಭರವಸೆ ಇಲ್ಲವಿದ್ದರೂ ಸಹ, ಕಂದಾಯ ವಸೂಲು ಮಾಡಲು ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದಾರೆ, ಇದರಲ್ಲೇನಾದರೂ ರಾಜಕೀಯ ಕೈವಾಡ ವಿದೆಯೇ, ಅಥವಾ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿವಳಿಕೆ ಕೊಡುತ್ತೀರಾ ಎಂಬ ವಿಚಾರವಾಗಿ ನಿರ್ದಿಷ್ಟವಾಗಿ ಕೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರನೇಕರು ಈ ವಿಚಾರವನ್ನೇ ಕೇಳುತ್ತಿದ್ದಾರೆ. ಈ ದಿನದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾವು ಯೋಚನೆ ಮಾಡಿ ಜಿಲ್ಲಾಧಿಕಾರಿಗಳಿಗೆ ಸರಿಯಾದ ಆದೇಶ ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನೈತರುಗಳು ತಮ್ಮ ಜಮೀನಿನಲ್ಲಿ ಎರಡನೇ ಬೆಳೆ ತೆಗೆಯಲು ಹಣ ಖರ್ಚುಮಾಡಿ, ನಂತರ ಫಸಲು ಆಗದೆ ಹೋದರೆ ಅವರಿಂದ ಕಂದಾಯ ವಸೂಲು ಮಾಡುವುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್ ಏನಿದೆ, ಅದರ ಪ್ರಕಾರ ಮಾಡುತ್ತೇವೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾವು ಆದೇಶ ಕೊಟ್ಟಿರುವುದರಲ್ಲಿ ಬಾಗಾಯಿತು ಕಂದಾಯ ವಸೂ ಮಾಡಿ, ಖುಷ್ಕಿ ಕಂದಾಯ ರಿಯಾಯಿತಿ ಕೊಡಿ ಎಂದು ಹೇಳಿದ್ದೀರಿ. ಆದರಿಂದ ಕಂದಾಯದ ವಸೂಲಾತಿ ನಿಂತಂತಾಯಿತೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಭೇದಭಾವ ಮಾಡಲಿಲ್ಲ. ಒಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಯಾವ ಪ್ರದೇಶದಲ್ಲಿ ಜನರಿಗೆ ಕೊಡಲಿಕ್ಕೆ ಶಕ್ತಿ ಇಲ್ಲವೋ, ಬೆಳೆ ಇಲ್ಲವೋ ಅಲ್ಲಿ ಪೂರ್ತಿ ವಸೂಲು ಮಾಡದೆ ಸ್ಟಾಪ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದೆ.

Construction of Hostel Buildings.

*Q.—151. Sri D. PARAMESWARAPPA (Honnali).—

Will the Government be pleased to state :—

(*a*) whether any request has been made for the construction of a hostel building for Schedule Castes and Schedule Tribes students at Honnali ;

(*b*) if so, the action taken by them in this respect ?

A.—Sri S. NIJALINGAPPA (Chief Minister).—

(*a*) Government are not aware of any such request.

(*b*) Does not arise.

Sri D. PARAMESWARAPPA.—In answer to my question (*a*) it has been stated that the Government are not aware of any such request. I have addressed a letter on 14th July to the concerned Minister with regard to this. Now can it be said that this representation is not received by the Government?

Sri S. NIJALINGAPPA.—It is very difficult to deny the truth of the statement made by the Hon'ble Member. I will look into it. I will have it examined.

Sri D. PARAMESWARAPPA.—Are the Government aware tha there are nearly 35 students in that hostel now?

Sri S. NIJALINGAPPA.—The Member is giving me information.

Sri D. PARAMESWARAPPA.—Are the Government aware that the building, where the hostel is run at present, is a rented building paying Rs. 50 per month?

Sri S. NIJALINGAPPA.—I thank the Member for the information.

Mr. SPEAKER.—If all that is contained in the letter, the best thing is for the letter to be examined by the Government.

Sri S. NIJALINGAPPA.—Let me assure my friend if the hoste deserves, the Government will do everything to help it.

Sri G. V. GOWDA.—Because of inadequacy of funds, it has not been possible to construct the building. May I request the Chief Minister to provide as much fund as possible in the Fourth Plan for the construction of these buildings?

Mr. SPEAKER.—Who said that there are no adequate funds?

Sri G. V. GOWDA.—Third Plan funds are already exhausted.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಮುಖ್ಯ ಮುಂತ್ರಿಗಳು ಒಪ್ಪಿಕೊಂಡಿರುವ ಪ್ರಕಾರ ಇಂತಹ ಬೇಡಿಕೆಗಳು ಬಂದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇದು ಹೊನ್ನಾಳಿಯಲ್ಲಿ ಕಟ್ಟ ತಕ್ಕಂತಹ ಒಂದು ಹೋಸ್ಟೆಲಿನ ವಿಷಯ. ಇದರ ಬಗ್ಗೆ ಸರ್ಕಾರದವರು ಈ ರೀತಿ ಉತ್ತರ ಕೊಡುವುದಕ್ಕೆ ಏನು ಕಾರಣ.

Mr. SPEAKER.—Without knowing the full facts, the Hon'ble Member is making suggestions. Sri Parameswarappa has written a letter and we have to ascertain what is the correct position.

Sri D. PARAMESWARAPPA.—I am not speaking from memory. I have got a copy of the letter addressed to the Government.

Mr. SPEAKER.—The Hon. Member may kindly pass it on and it will be examined.

Sri S. NIJALINGAPPA.—If it deserves, I will certainly try to help.